# ಕಾರ್ಮಿಕರ ಸುಧಾರಣೆಗೆ ಡಾ. ಬಿ ಆರ್ ಅಂಬೇಡ್ಕರ್ ಅವರ ಕೊಡುಗೆಗಳು

**ಸುರೇಶ ಸಂಕಣ್ಣವರ ಎಸ್.[1] & ಮಕ್ತುಮ್ ಹುಸೇನ್ ಅಗಡಿ[2]**

[1]ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

[2]ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**DOI: https://doi.org/10.5281/zenodo.17805787**

## ABSTRACT:

ಆಧುನಿಕ ಭಾರತದ ವಾಸ್ತುಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು ಭಾರತೀಯ ಕಾರ್ಮಿಕರ ಹಕ್ಕುಗಳು ಮತ್ತು ಕಲ್ಯಾಣಕ್ಕೆ ನೀಡಿದ ಮಹತ್ವದ ಕೊಡುಗೆಗಳನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಅಂಬೇಡ್ಕರ್ ಅವರು ಕಾರ್ಮಿಕರ ಸುಧಾರಣೆಗೆ ಕಾನೂನು ಮತ್ತು ರಾಜಕೀಯ ಮಟ್ಟದಲ್ಲಿ ಹೋರಾಡಿದರು, ಆಗಸ್ಟ್ 1936 ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ILP) ಅನ್ನು ಸ್ಥಾಪಿಸಿದರು. ಅವರ ಕೊಡುಗೆಗಳು ಕಾರ್ಮಿಕರ ಹಕ್ಕುಗಳ ಕಾಯ್ದೆಗಳಿಗೆ ಸುಧಾರಣೆ ತಂದವು, ಇದರಲ್ಲಿ ಉತ್ತಮ ವೇತನ, ಕೆಲಸದ ಸಮಯದ ನಿಗದಿ, ಮತ್ತು ಸುರಕ್ಷತಾ ಮಾನದಂಡಗಳು ಸೇರಿವೆ. ಅವರು ಶಿಕ್ಷಣದ ಮೂಲಕ ಕಾರ್ಮಿಕರ ಸಬಲೀಕರಣ, ಸಾಮಾಜಿಕ ಭದ್ರತೆ ಮತ್ತು ಸಮಾನತೆಗಾಗಿ ಒತ್ತು ನೀಡಿದರು. ಅಂಬೇಡ್ಕರ್ ಅವರ ದೃಷ್ಟಿಕೋನವು ಶ್ರಮಿಕ ವರ್ಗದವರಿಗೆ ಘನತೆ ಮತ್ತು ನ್ಯಾಯವನ್ನು ಒದಗಿಸುವ ಗುರಿಯನ್ನು ಹೊಂದಿತ್ತು, ಇದು ಇಂದಿಗೂ ಸಾಮಾಜಿಕ ನ್ಯಾಯಕ್ಕೆ ಸ್ಫೂರ್ತಿಯಾಗಿದೆ.

## KEYWORDS:

ಡಾ. ಬಿ. ಆರ್. ಅಂಬೇಡ್ಕರ್, ಕಾರ್ಮಿಕರ ಹಕ್ಕುಗಳು, ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ILP), ಸಾಮಾಜಿಕ ನ್ಯಾಯ, ಕಾರ್ಮಿಕರ ಕಲ್ಯಾಣ.

**ಪೀಠಿಕೆ**

ಭಾರತದಲ್ಲಿ ಕಾರ್ಮಿಕರಿಗೆ ಅವರ ಹಕ್ಕುಗಳ ಕುರಿತು ವಾಸ್ತವವಾಗಿ ದೊರಕಿಸಿಕೊಟ್ಟ ದೀಮಂತ ನಾಯಕರು, ಆಧುನಿಕ ಭಾರತದ ಪಿತಾಮಹ ಸಂವಿಧಾನ ಶಿಲ್ಪಿ ಹಾಗೂ ಕ್ರಾಂತಿಕಾರಿ ಡಾ.ಬಾಬಾಸಾಹೇಬ್ ಅಂಬೇಡ್ಕರ್. ಭಾರತದ ಕಾರ್ಮಿಕ ವಲಯದ ಬಗ್ಗೆ ಬಹುಮುಖಿ ಚಿಂತನೆ ಹೊಂದಿದ್ದ ಮತ್ತು ಅವರ ಬಗ್ಗೆ ದೂರದೃಷ್ಟಿ ಇರಿಸಿಕೊಂಡಿದ್ದ ಮಹಾನ್ ನೇತಾರ ಅವರು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಭಾರತೀಯ ಸಮಾಜದ ಪುನರಾವಲೋಕನಕ್ಕೆ ಮಹತ್ವಪೂರ್ಣ ಕೊಡುಗೆ ನೀಡಿದ್ದಾರೆ. ಅವರು ಸಮಾಜದಲ್ಲಿ ಬೇರೆ ಬೇರೆ ಸಮುದಾಯಗಳ ಹಕ್ಕುಗಳನ್ನು ಸುಧಾರಿಸಲು ನಾನಾ ಹೋರಾಟಗಳನ್ನು ನಡೆಸಿದವರು. ವಿಶೇಷವಾಗಿ ಮಹಿಳೆಯರ, ದೀನದಲಿತರ, ಹಿಂದುಳಿದ ಸಮುದಾಯದ, ಮತ್ತು ಕಾರ್ಮಿಕರ ಹಕ್ಕುಗಳನ್ನು ಹಾಗೂ ಅವರ ಕಲ್ಯಾಣವನ್ನು ಸಾಧಿಸಲು ಅವರು ಮಾಡಿದ ಪ್ರಯತ್ನಗಳು ಅಪಾರವಾದವು. ಅಂಬೇಡ್ಕರ ಅವರ ದೃಷ್ಟಿಕೋನವು ಸಮಾಜದ ಪ್ರತಿಯೊಬ್ಬರೂ ಸಮಾನ ಅವಕಾಶಗಳನ್ನು ಪಡೆಯುವ ಹಕ್ಕು ಮತ್ತು ಗೌರವ ಪಡೆಯಬೇಕೆಂಬ ಉದ್ದೇಶದಿಂದ ಸಾಂವಿಧಾನಿಕ ಸವಲತ್ತುಗಳನ್ನು ಸಿಗುವಂತೆ ಮಾಡಿದ್ದಾರೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಕಾರ್ಮಿಕರ ಹಕ್ಕುಗಳನ್ನು, ಕಲ್ಯಾಣವನ್ನು ಮತ್ತು ದುಡಿಮೆಗೆ ತಕ್ಕ ವೇತನ ದಿನಕ್ಕೆ ಎಷ್ಟು ಗಂಟೆ ಕೆಲಸ ಮಾಡಬೇಕು ಎನ್ನುವುದನ್ನು

ಜಗತ್ತಿಗೆ ತಿಳಿಯುವಂತೆ ಮಾಡಿದ್ದಾರೆ. ಕಾರ್ಮಿಕರ ಹಕ್ಕುಗಳನ್ನು ಅವರು ಗಟ್ಟಿಯಾಗಿ ಬೆಂಬಲಿಸಿ, ತಮ್ಮ ಹೋರಾಟದ ಕಾರ್ಯಗಳನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸುವತ್ತ ಸಮರ್ಥವಾಗಿ ಹೋರಾಟ ನಡೆಸಿದರು. ಸಮಾಜದಲ್ಲಿ ಕಾರ್ಮಿಕರ ಸ್ಥಿತಿಯನ್ನು ಸುಧಾರಿಸಲು ಮತ್ತು ಅವರ ಹಕ್ಕುಗಳನ್ನು ಕಾಪಾಡಲು ಅನೇಕ ಹೋರಾಟಗಳನ್ನು ನಡೆಸಿದರು.

**ಕಾರ್ಮಿಕರ ಸುಧಾರಣೆಗೆ ಅಂಬೇಡ್ಕರ್ ಅವರ ಕೊಡುಗೆಗಳು**

ಅಂಬೇಡ್ಕರ್ ಅವರ ಕಾರ್ಮಿಕ ಕಾಳಜಿ ನೀತಿ ಕಾನೂನು ಮಟ್ಟದಲ್ಲಿ ಮಾತ್ರವಲ್ಲದೆ ರಾಜಕೀಯ ಮಟ್ಟದಲ್ಲಿಯೂ ಇತ್ತು. ಅವರು ಆಗಸ್ಟ್ 1936 ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ILP) ಅನ್ನು ಹುಟ್ಟುಹಾಕಿದರು, ಅದು ಕಾರ್ಮಿಕರ ಪಕ್ಷವಾಗಿ ಸ್ವತಃ ಬಿಂಬಿಸಿತು. 1937 ರಲ್ಲಿ ಪ್ರಕಟವಾದ ಐಎಲ್ಪಿಯ ಪಕ್ಷದ ಕಾರ್ಯಕ್ರಮವು 'ಕಾರ್ಮಿಕ ಸಂಘಟನೆಯ ಅರ್ಥದಲ್ಲಿ ಅದರ ಕಾರ್ಯಕ್ರಮವು ಮುಖ್ಯವಾಗಿ ಕಾರ್ಮಿಕ ವರ್ಗಗಳ ಕಲ್ಯಾಣವನ್ನು ಮುನ್ನಡೆಸುವುದಾಗಿದೆ' ಎಂದು ವಿವರಿಸಿದೆ. ಇನ್ನು ಮುಂತಾದ ಕಾರ್ಮಿಕರ ಸುಧಾರಣೆಗೆ ಅನೇಕ ಹೋರಾಟಗಳು ಈ ಕೆಳಗಿನಂತೆ ನೋಡಬಹುದು.

**1. ಅಂಬೇಡ್ಕರ್ ಮತ್ತು ಕಾರ್ಮಿಕರ ಹಕ್ಕುಗಳು:**

ಅಂಬೇಡ್ಕರ ಅವರ ಕೈಗೊಳ್ಳುವ ಹೋರಾಟಗಳಲ್ಲಿ ಕಾರ್ಮಿಕರ ಹಕ್ಕುಗಳ ಕುರಿತು ಬಹಳ ಪ್ರಮುಖವಾಗಿದ್ದವು. ಅವರು ಕಾರ್ಮಿಕರ ಹಕ್ಕುಗಳನ್ನು ಅತ್ಯಗತ್ಯವೆಂದು ಪರಿಗಣಿಸಿದ್ದರು ಮತ್ತು ತಮ್ಮ ಕಾನೂನು ಮಾರ್ಗದರ್ಶನದಲ್ಲಿ ಸಮಾನತೆ, ನ್ಯಾಯ, ಭದ್ರತೆ, ಮತ್ತು ವ್ಯಕ್ತಿತ್ವದ ಗೌರವ ಹಕ್ಕುಗಳನ್ನು ಒದಗಿಸಲು ಶ್ರಮಿಸಿದ್ದರು. ಅವರ ಕೊಡುಗೆಗಳು ಕಾರ್ಮಿಕರ ಹಕ್ಕುಗಳ ಕಾಯ್ದೆಗೆ ಸುಧಾರಣೆಯ ಗುರಿಯನ್ನು ಸಾಧಿಸಿತು. ಅವರು ಕಾರ್ಮಿಕರಿಗೆ ಉತ್ತಮ ಸಂಬಳ, ಸಮಯದ ನಿಯಮಗಳು, ವಿಶ್ರಾಂತಿ ಸಮಯ ಮತ್ತು ಸುರಕ್ಷತೆ ಸೇರಿದಂತೆ ಉತ್ತಮ ಕೆಲಸದ ಪರಿಸರವನ್ನು ಒದಗಿಸುವ ಪ್ರಸ್ತಾಪಗಳನ್ನು ತೆಗೆದುಕೊಂಡರು.

**2. ಶಿಕ್ಷಣ ಮತ್ತು ಕಾರ್ಮಿಕರ ಸಬಲೀಕರಣ:**

ಅಂಬೇಡ್ಕರ ಅವರು ಕಾರ್ಮಿಕರ ಶ್ರೇಯಸ್ಸನ್ನು ಗಮನದಲ್ಲಿಟ್ಟು, ಅವರಿಗೆ ಉತ್ತಮ ಶಿಕ್ಷಣವನ್ನು ಒದಗಿಸುವುದನ್ನು ಅತ್ಯಂತ ಮಹತ್ವಪೂರ್ಣ ಎಂದು ಪರಿಗಣಿಸಿದರು. ಅವರು ನಿರುದ್ಯೋಗ, ಅನಕ್ಷರತೆ ಮತ್ತು ಹಿಂಸಾಚಾರದಿಂದ ಮುಕ್ತವಾಗಲು ಶಿಕ್ಷಣವೇ ಸಮರ್ಥ ಮಾರ್ಗ ಎಂದು ನಂಬಿದರು. ಅವರ ಹೋರಾಟಗಳ ಪರಿಣಾಮವಾಗಿ, ಕಾರ್ಮಿಕರಿಗೆ ಹೆಚ್ಚು ಅವಕಾಶಗಳು ದೊರಕಿದವು ಮತ್ತು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಹೆಚ್ಚಿನ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಲು ಅವರಿಗೆ ತರಬೇತಿ ಮತ್ತು ಅವಕಾಶ ನೀಡುವಂತಹ ನೀತಿಗಳನ್ನ ರೂಪಿಸಿದರು.

ಶಿಕ್ಷಣವು ಕಾರ್ಮಿಕರ ಸ್ವಾವಲಂಬನೆ ಮತ್ತು ಸಮಾನತೆಯ ಮಾರ್ಗವಾಗಿದೆ. ಶಿಕ್ಷಣವು ಕಾರ್ಮಿಕರನ್ನು ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯಲು ನೆರವಾಗುತ್ತದೆ. ಅವರು ಕಾರ್ಮಿಕರ ಮುಂದಿನ ಪೀಳಿಗೆಗೆ ಉತ್ತಮ ಶಿಕ್ಷಣ ಹಾಗೂ ತರಬೇತಿಯನ್ನು ಒದಗಿಸಲು ಅವರಿಗೆ ಹೆಚ್ಚಿನ ಮಹತ್ವವನ್ನು ನೀಡಿದರು. ಅಂಬೇಡ್ಕರ ಅವರ ಹೋರಾಟದಲ್ಲಿ ಶ್ರಮಿಕ ವರ್ಗದವರಿಗೆ ಹೆಚ್ಚು ಶಿಕ್ಷಣ ನೀಡಲು ಮತ್ತು ಅವರ ಕೌಶಲ್ಯಗಳನ್ನು ಪಡೆಯುವಂತೆ ಪ್ರೇರೇಪಿಸಿದರು.

**3. ಕಾರ್ಮಿಕರ ಭದ್ರತೆಗೆ ಒತ್ತು:**

ಅಂಬೇಡ್ಕರ ಅವರು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕೆಲಸದ

ಸಂದರ್ಭ ಮತ್ತು ಅವರ ಭದ್ರತೆಗಾಗಿ ಉತ್ತಮ ನಿಯಮಗಳು, ನೀತಿಗಳು ಮತ್ತು ಕಾನೂನುಗಳನ್ನು ರೂಪಿಸಬೇಕೆಂದು ಅವರು ಒತ್ತಾಯಿಸಿದರು. ಅವರು ಉದ್ಯೋಗ ಗ್ಯಾರಂಟಿ, ಜೀವವಿಮೆ, ನಿರುದ್ಯೋಗ ಸಹಾಯ ಮತ್ತು ಮೇಲ್ವಿಚಾರಣೆಯ ಪ್ರಕ್ರಿಯೆಗಳು ಕುರಿತಂತೆ ಅನುಕೂಲವಾದ ನಿಯಮ, ಕಾಯ್ದೆಗಳು ಮತ್ತು ಕಾನೂನುಗಳನ್ನು ಸೇರಿಸಿಕೊಂಡರು. ಅವರು ಕಾರ್ಮಿಕರ ಆರೋಗ್ಯ ಮತ್ತು ಭದ್ರತೆಗೆ ಪ್ರಾಮುಖ್ಯತೆ ನೀಡಿದರು. ಅವರು ಕಾರ್ಮಿಕರ ಕೆಲಸದ ಪರಿಸರವನ್ನು ಸುಧಾರಿಸಲು ಮತ್ತು ಸುರಕ್ಷಿತವಾಗಿಸಲು ಅನೇಕ ಕಾನೂನುಗಳು ಮತ್ತು ನಿಯಮಗಳನ್ನು ರೂಪಿಸಲು ಶ್ರಮಿಸಿದರು. ಇದರಲ್ಲಿ ಕಾರ್ಮಿಕರ ಶುಚಿತ್ವ, ಸಮಯದ ನಿಯಮಗಳು ಮತ್ತು ವಿಶ್ರಾಂತಿ ಸಮಯವನ್ನು ಗುರುತಿಸಲಾಗಿತ್ತು. ಈ ಕಾಯ್ದೆ ಕಾನೂನಗಳು ಕಾರ್ಮಿಕರ ಹಕ್ಕುಗಳು ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಸಹಾಯಕವಾಗಿವೆ.

**4. ಸಾಮಾಜಿಕ ನ್ಯಾಯ ಮತ್ತು ಸಮಾನತೆ:**

ಅಂಬೇಡ್ಕರ ಅವರು ಸಮಾಜದಲ್ಲಿ ಎಲ್ಲಾ ವರ್ಗಗಳಿಗೆ ಸಮಾನ ಹಕ್ಕು ಮತ್ತು ಅವಕಾಶ ನೀಡುವಂತೆ ಚಳುವಳಿ ಮಾಡಿದವರು ಅವುಗಳಲ್ಲಿ ಕಾರ್ಮಿಕರ ಹೋರಾಟವು ಒಂದು. ಅವರು ರಚಿಸಿದ ಕಾನೂನಿನಲ್ಲಿ ದಲಿತ, ಹಿಂದುಳಿದ ವರ್ಗಗಳು, ಹಾಗೂ ಕಾರ್ಮಿಕರ ಹಕ್ಕುಗಳನ್ನು ಪಡೆಯುವಲ್ಲಿ ಸಹಾಯಕವಾದವು. ಅವರು ಸಮಾಜದಲ್ಲಿ ಶ್ರೇಷ್ಠತೆ, ಬದ್ಧತೆ, ಮತ್ತು ಗೌರವ ಕಾಪಾಡುವಂತೆ ಮಾಡಿದರು. ಅವರು ಕಾರ್ಮಿಕರನ್ನು ನಿತ್ಯದ ಹೀನದ ಸ್ಥಿತಿಯಿಂದ ಮುಕ್ತಗೊಳಿಸುವಂತೆ ಹೋರಾಟ ಮಾಡಿದವರು.

ಅಂಬೇಡ್ಕರ ಅವರು ಕಾರ್ಮಿಕರಿಗೂ ದಲಿತ ಹಾಗೂ ಹಿಂದುಳಿದ ವರ್ಗಗಳಂತೆ ಒದಗುವ ಕಾನೂನುಗಳ ಸಹಾಯದಿಂದ ಸಮಾಜದಲ್ಲಿ ಅವರ ಮಾನವೀಯ ಹಕ್ಕುಗಳನ್ನು ಕಾಪಾಡಲು ಸಾಕಷ್ಟು ಪ್ರಭಾವ ಬೀರಿದರು. ಕಾರ್ಮಿಕರ ಶೋಷಣೆಗೆ ವಿರೋಧ ವ್ಯಕ್ತಪಡಿಸಿದರು ಮತ್ತು ಸರ್ಕಾರಗಳಿಗೆ ಕಾರ್ಮಿಕರ ಹಕ್ಕುಗಳನ್ನು ಕಾಪಾಡಲು ನಿಯಮಗಳನ್ನು ರೂಪಿಸಲು ಒತ್ತಾಯಿಸಿದರು. ಅಂಬೇಡ್ಕರ ಅವರ ಹೋರಾಟಗಳು ಕಾರ್ಮಿಕರ ಹಕ್ಕುಗಳನ್ನು ಪ್ರತಿಷ್ಠಾಪಿಸುವ ಹಾಗೂ ಅವರ ಜೀವನದ ಮಟ್ಟವನ್ನು ಉತ್ತಮಗೊಳಿಸಲು ಮತ್ತು ಸಮಾಜದಲ್ಲಿ ಸಮಾನವಾಗಿ ಬದುಕುವಂತೆ ಕಾನೂನುಗಳನ್ನು ನಿರ್ಮಿಸಿದರು. ಅವರ ಪ್ರೋತ್ಸಾಹದಿಂದ, ಸಮಾಜದಲ್ಲಿ ಕಾರ್ಮಿಕರ ಕಲ್ಯಾಣ ಮತ್ತು ಪರಿವರ್ತನೆಯ ದೃಷ್ಟಿಕೋನಗಳು ಉದಯವಾದವು.

**5. ಕಾರ್ಮಿಕರ ವೇತನ ಮತ್ತು ಹಕ್ಕುಗಳು:**

ಅಂಬೇಡ್ಕರ್ ಅವರು ಭಾರತೀಯ ಸಮಾಜದಲ್ಲಿ ಕಾರ್ಮಿಕರ ವೇತನ ಮತ್ತು ಹಕ್ಕುಗಳ ಕುರಿತಂತೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅವರು ಕಾರ್ಮಿಕರ ಹಕ್ಕುಗಳನ್ನು ಪ್ರಸ್ತಾಪಿಸುವಾಗ ಸಮಾನತೆಯನ್ನು, ಸಾಮಾಜಿಕ ನ್ಯಾಯವನ್ನು ಮತ್ತು ಶ್ರೇಣೀ ವ್ಯವಸ್ಥೆ ಒಳಗೊಂಡ ಒಂದು ಸಂಕೀರ್ಣವಾದ ದೃಷ್ಟಿಕೋನವನ್ನು ವಿಸ್ತಾರಗೊಳಿಸಿದರು.

ಅಂಬೇಡ್ಕರ ಅವರು ಕಾರ್ಮಿಕರ ವೇತನ ಮತ್ತು ಕೆಲಸದ ಸಮಯದ ಅವಧಿ ನಿಗದಿ ಮಾಡಬೇಕು ಹಾಗೂ ಸಮಾನತೆ ಮತ್ತು ನ್ಯಾಯಕ್ಕಾಗಿ ಹೋರಾಡಿದರು. ಅವರು "ಕಲ್ಯಾಣ ಕಾರ್ಯ" ಅಥವಾ "ವೈಯಕ್ತಿಕ ನ್ಯಾಯ" ಎನ್ನುವ ದೃಷ್ಟಿಯಿಂದ ಕಾರ್ಮಿಕರಿಗೆ ಅತ್ಯಗತ್ಯವಾದ ಅವಶ್ಯಕತೆಗಳನ್ನು ಕಲ್ಪಿಸಿಕೊಟ್ಟರು. ಸರ್ಕಾರಗಳಿಗೆ ಒತ್ತಾಯಿಸಿ ಕಾರ್ಮಿಕರ ಅಭಿವೃದ್ಧಿಗಾಗಿ ಉತ್ತಮ ಮಾರ್ಗಗಳನ್ನು ನಿರ್ಮಿಸಿದರು.

ಅಂಬೇಡ್ಕರ ಅವರು ತಮ್ಮ ತಾತ್ವಿಕ ಚಿಂತನೆ, ಕಾನೂನು ಸಂಶೋಧನೆ ಮತ್ತು

ಸಾಮಾಜಿಕ ಹೋರಾಟಗಳ ಮೂಲಕ ಕಾರ್ಮಿಕರ ಸ್ಥಿತಿಯನ್ನು ಸುಧಾರಿಸುವ ಮಹತ್ವಪೂರ್ಣ ಚಟುವಟಿಕೆಗಳನ್ನು ನಡೆಸಿದರು. ಅವರ ಪ್ರೋತ್ಸಾಹದಿಂದ, ಕಾರ್ಮಿಕರಿಗೆ ಸಮಾನ ಹಕ್ಕುಗಳು, ಸಂತೋಷದ ಜೀವನ, ಉತ್ತಮ ಪರಿಸರ ಮತ್ತು ಹೆಚ್ಚು ಅವಕಾಶಗಳು ದೊರಕಿದವು. ಈ ಹೋರಾಟಗಳು ಇಂದಿಗೂ ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ದಾರಿ ಕಾಣಿಸುತ್ತದೆ. ಅಂಬೇಡ್ಕರ ಅವರ ಹೋರಾಟಗಳು ಕಾರ್ಮಿಕರ ಸಮೃದ್ಧಿ ಮತ್ತು ಕಲ್ಯಾಣವನ್ನು ಹೆಚ್ಚು ಪ್ರಾಮುಖ್ಯತೆ ನೀಡಿದವು. ಅವರು ಸಮಾಜದಲ್ಲಿ ಸಮಾನತೆ, ಭದ್ರತೆ, ನ್ಯಾಯ, ಮತ್ತು ಗೌರವವನ್ನು ಪ್ರತಿಷ್ಠಾಪಿಸಲು ಹಲವು ಹೋರಾಟಗಳನ್ನು ನಡೆಸಿದರು. ಈ ಹೋರಾಟಗಳು ಇದೀಗ ಭಾರತೀಯ ಸಮಾಜದಲ್ಲಿ ಹಕ್ಕುಗಳನ್ನು ಮತ್ತು ವಿಚಾರಗಳನ್ನು ಗೌರವಿಸುವ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರೇರಣೆಯಾದವು. ಇಂತಹ ಹೋರಾಟಗಳು ಕಾರ್ಮಿಕರನ್ನು ಹೆಚ್ಚಿಸುವುದರಲ್ಲಿ ಮತ್ತು ಅವರ ಹಕ್ಕುಗಳನ್ನು ಕಾಪಾಡಲು ಸಂಬಂಧಿತ ಕಾನೂನುಗಳ ರೂಪಗೊಳ್ಳುವಲ್ಲಿ ನೆರವಾದವು.

**ಪರಾಮರ್ಶನ ಗ್ರಂಥಗಳು:**


1. ಡಾ. ಬಿ.ಆರ್. ಅಂಬೇಡ್ಕರ್: ಬರಹಗಳು ಮತ್ತು ಭಾಷಣಗಳು. ಮುಂಬೈ: ಮಹಾರಾಷ್ಟ್ರ ಸರ್ಕಾರ. (1991)
2. ಕಲ್ಸಿ, ಎ. (2016). ಅಂಬೇಡ್ಕರ್ ಅವರ ಸ್ವತಂತ್ರ ಕಾರ್ಮಿಕ ಪಕ್ಷ: ದಲಿತರ ವಿಮೋಚನೆ. ಅಂತರರಾಷ್ಟ್ರೀಯ ವ್ಯವಹಾರ ನಿರ್ವಹಣೆ ಮತ್ತು ವೈಜ್ಞಾನಿಕ ಸಂಶೋಧನೆಯ ಜರ್ನಲ್
3. "Introduction to The Constitution of India": Durga Das Basu
4. "Constitutional Law of India": ಡಾ. ಎ. ಎನ್. Pandey.
5. "International Journal": ಡಾ. B.R. Ambedkar Role In Making Of The Indian Constitution



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.